
ಬೆಳಗಾವಿಯ ಮಾತೆತ್ತಿದ್ದಳು. 'ತಮ್ಮೆಡೆಗೆ ಬರದಿದ್ದರೆ ಸಾಕು' ಎಂದ ವಿಠ್ಠಲ, ರಕುಮಾ ಬೆಳಗಾವಿಯ ಟಿಳಕಚೌಕದ ರಾಯರಮಠದ ಹಿಂದಿನ ಕೋನವಾಳ ಗಲ್ಲಿಯಲ್ಲಿ... ಚಾಳದಲ್ಲಿ ಒಂದು ಪುಟ್ಟ ಮನೆ ಹುಡುಕಿದರು. ಕೊಣ್ಣೂರಿನ ಮನೆಯ ಬಾಣಂತಿ ಖೋಲಿಯಷ್ಟಿತ್ತು ಇಡೀ ಮನೆ. ಹೊರಗೊಂದು ಚಿಕ್ಕ ಪಡಸಾಲೆ, ಅಂಟಿಕೊಂಡಿದ್ದ ಖೋಲಿ, ತುಸು ದೊಡ್ಡ ನಡುಮನೆ, ಅಷ್ಟೇ ಅಡಿಗೆಮನೆ, ಹಿಂದೆ ಬಚ್ಚಲು ಮತ್ತು ಸಂಡಾಸು. ಎಲ್ಲರೂ ಅಳುತ್ತಲೇ ಕೊಣ್ಣೂರು ಬಿಟ್ಟಿದ್ದರು. ನಿಂಗಪ್ಪ ಅಪರಾಧಿ ಸ್ಥಾನದಲ್ಲಿದ್ದವನಂತೆ ತಾನೂ ಅತ್ತು ಕಳಿಸಿದ್ದ. ಬೆಳಗಾವಿಯ ಮನೆ ನೋಡಿ ಎಲ್ಲರೂ ಪೆಚ್ಚಾಗಿದ್ದರು. ಮೊದಲು ತೊಂದರೆಯಾದರೂ ನಿಧಾನವಾಗಿ ಹೊಂದಿಕೆಯಾಯಿತು. ಸಮೀರ ಜಿ.ಐ.ಟಿ. ಎಂಜಿನಿಯರಿಂಗ್ ಕಾಲೇಜ್ ಸೇರಿದ. ಭಾಗಕ್ಕನಿಗೆ ಪಕ್ಕದಲ್ಲೇ ರಾಯರ ಮಠ. ನಿತ್ಯ ಪುರಾಣ ಪ್ರವಚನಗಳು ಇಷ್ಟವಾದವು. ಕೃಷ್ಣನಿಗೂ ನಿತ್ಯ ರಾಯರ ದರ್ಶನ, ಕಟ್ಟೆಯವರ ಅಂಗಡಿಯಲ್ಲಿ ಹರಟೆಯಾಗುತ್ತಿತ್ತು. ಪದ್ಮ ಎಲ್ಲ ತೂಗಿಸಿಕೊಂಡು ಹೋಗುತ್ತಿದ್ದಳು. ತೊಂದರೆಯೆಂದರೆ ಈಗ ಎಲ್ಲ ದವಸ, ಧಾನ್ಯಗಳನ್ನು ಕೊಳ್ಳಬೇಕಿತ್ತು. ರಾಶಿಗಟ್ಟಲೆ ಮನೆಯಲ್ಲಿ ಪೇರಿಸಿ ಅಭ್ಯಾಸವಿದ್ದವರು ಕಿಲೊ ಲೆಕ್ಕದಲ್ಲಿ ಕೊಳ್ಳುವುದು ದುಸ್ತರವಾಗುತ್ತಿತ್ತು. ಹಾಗಿರುವಾಗ ನಿಂಗಪ್ಪ ತಂದು ಕೊಡುವ ಒಂದೊಂದು ಚೀಲವೂ ಮಹತ್ವದ್ದಾಗಿರುತ್ತಿತ್ತು.

ಮರುದಿನ, "ಮಗನ ಕಣ್ಣುತಪ್ಪಿಸಿ ತಂದನಂತ..." ಎಂದಳು ಪದ್ಮ. ಕೃಷ್ಣ, "ಇಷ್ಟರ ಕೊಡತಾನಲಾ.. ಸಾಕೇಳು..." ಎಂದವ ಹಾಗೇ, "ನಾಳೆ ನಾನು ಹಿಂಡಲಗಾಕ್ಕ ಹೋಗಬೇಕು. ಗೆಳೆಯಾನ ಗೃಹಪ್ರವೇಶ ಅದ" ಎಂದ. ಪದ್ಮ, "ಅತ್ತೆವರೂ ನೋಡಬೇಕು ಅನ್ಲಿಕತ್ತಿದ್ರು" ಎಂದಳು ಮೆತ್ತಗೆ. "ಅಲ್ಲೆ ನನಗಷ್ಟ ಹೇಳ್ಯಾರ. ನೀವು ಗಣಪ್ಪನ ಗುಡಿ ನೋಡ್ಲಿಕ್ಕೆ ಬರ್ತಿದ್ರ ಬರ್ರಿ" ಎಂದನವ. ಭಾಗಕ್ಕ ಅನುಮಾನಿಸುತ್ತ, "ನಾಡದ ವಾಸಣ್ಣಂದು..." ಎನ್ನುವಷ್ಟರಲ್ಲಿ ಪದ್ಮ ಅತ್ತೆಯ ಕೈಒತ್ತಿ, "ಅತ್ತೆವರೂ ಬರ್ತಾರ. ರಿಕ್ಷಾ ಹೇಳ್ರಿ" ಎಂದು ದೃಢವಾಗಿ ಹೇಳಿದಳು. ಅದರಂತೆ ಮರುದಿನ ಅವರಿಬ್ಬರನ್ನೂ ದೇವಸ್ಥಾನದ ಬಳಿ ಇಳಿಸಿ ತಾನೂ ಕೈಮುಗಿದು, "ಆರಾಮ ಕೂತಿರ್ರಿ. ನಾ ಬರೋತನಕಾ ಎರಡ ತಾಸಾದೀತು" ಎಂದು ನಡೆದ. ಇಬ್ಬರೂ ಗಣಪತಿಗೆ ಕೈಮುಗಿದು ಪ್ರದಕ್ಷಿಣೆ ಬಂದು ಪ್ರಾರ್ಥಿಸಿ ಕಟ್ಟೆಯ ಮೇಲೆ ಕುಳಿತರು. ಹನ್ನೊಂದು ಗಂಟೆಗೆಲ್ಲ ಗುಡಿ ಶಾಂತವಾಗಿ ಗಣೇಶನೊಂದಿಗೆ ಇವರಿಬ್ಬರೇ ಉಳಿದರು.



ಪದ್ಮ ಮಾತಿಗೆ ಪೀಠಿಕೆ ಹಾಕುತ್ತ, "ಅತ್ತೆವರ... ನಾ ಈ ಸಲಾ ತವರಮನಿಗೆ ಹೋದಾಗ ಗೋದಕ್ಕಜ್ಜಿ ಭೆಟ್ಟ್ಯಾಗಿದ್ದರು. ವಾಸಣ್ಣ ಭಾವಜಿ ಬಗ್ಗೆ ಏನೇನೋ ಹೇಳಿದ್ರು" ಎಂದಳು. ಭಾಗಕ್ಕ ಆಕಾಶವನ್ನೇ ದಿಟ್ಟಿಸುತ್ತ, "ಏನಂತ?..." ಎಂದು ಕೇಳಿದರು. "ಅದ... ಮಾವನವರು ಕರಕೊಂಡು ಬಂದದ್ದು ತಮ್ಮ ಗೆಳೆಯಾನ ಮಗನ್ನ ಅಂತ... ಸಣ್ಣಾವ್ರಿದ್ದಾಗ ತಮ್ಮ ಅಬಚಿ ಊರಿಗೆ ಹೋದಾಗ ಕೂಡಿ ಆಡತಿದ್ರಂತ. ಅವರು ಮುಸುಲ್ರಂತ. ಹುಡುಗನ ಹೆಸರು ವಸೀಮ ಅಂತ. ಅದ ವಾಸುದೇವ ಆತಂತ..." ಎಂದು ಹೆದರುತ್ತಲೇ ಹೇಳಿದಳು. ಭಾಗಕ್ಕ ನಿಧಾನವಾಗಿ, "ನನಗೂ ಗೊತ್ತದ. ಎಲ್ಲಿಂದನೋ ಸುದ್ದಿ ಬಂದಿತ್ತು..." ಎಂದರು. ಪದ್ಮ ಸೀರೆಯ ಅಂಚು ತಿರುವುತ್ತಾ, "ಹಳೇದೆಲ್ಲಾ ಹೋಗಲಿ. ಈಗ ಅವರು ಹೋದಮ್ಯಾಲೂ ಅವರ ಶ್ರಾದ್ಧ ಯಾಕ ಮಾಡಬೇಕು? ಅವರದೂ ನಮ್ಮದೂ ಪದ್ಧತಿ ಬ್ಯಾರೇಬ್ಯಾರೇ ಇರತಾವ. ಬಿಟ್ಟುಬಿಟ್ಟರಾತು" ಎಂದಳು. ಭಾಗಕ್ಕನ ಮುಖ ಗಂಭೀರವಾಯಿತು. "ನೋಡು ಪದ್ಮಾ, ಅಂವಾ